**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 563/2019**

**ಸಾಕ್ಷಿಗೆ ದಿನಾಂಕಃ 17.1.2022 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಆರ್.ಕುಮಾರ್ | ಪಿ.ಡಬ್ಲ್ಯೂ-6 |
| ತಂದೆಯ/ಗಂಡನ ಹೆಸರು | : | ಲೇಟ್ ರಾಮಯ್ಯ | ಸಿ.ಡಬ್ಲ್ಯೂ-13 |
| ವಯಸ್ಸು | : | 55 | |
| ಉದ್ಯೋಗ | : | ಎ.ಎಸ್.ಐ | |
| ವಾಸಸ್ಥಳ | : | ಕೆ.ಆರ್.ನಗರ | |

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ನಾನು 6.5.2018 ರಿಂದ ಈ ದಿನದವರೆಗೆ ಬೀಚನಹಳ್ಳಿ ಪೋಲಿಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 20.5.2019 ರಂದು ಚಾಸ 12 ರಿಂದ ಕೇಸಿನ ಕಡತಗಳನ್ನು ಪಡೆದುಕೊಂಡು ಪರಿಶೀಲಿಸಿರುತ್ತೇನೆ. ಅವರು ಚಾಸ 1 ರವರಿಂದ ದೂರು ಪಡೆದುಕೊಂಡು ಪ್ರಕರಣ ದಾಖಲಿಸಿ, ಪ್ರ.ವ.ವ. ಯನ್ನು ತಯಾರಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ದಿನಾಂಕ 26.4.2019 ರಂದು ಘಟನಾ ಸ್ಥಳಕ್ಕೆ ಭೇಟಿ ನೀಡಿ ಚಾಸಾ.1 ರವರು ಕೃತ್ಯ ನಡೆದ ಸ್ಥಳವನ್ನು ತೋರಿಸಿಕೊಟ್ಟ ಮೇರೆಗೆ ಪಂಚರುಗಳಾದ ಚಾಸಾ.9 ಮತ್ತು 10 ರವರ ಸಮಕ್ಷಮ ಸ್ಥಳಪಂಚನಾಮೆಯನ್ನು ಜರುಗಿಸಿ ದೊಣ್ಣೆಯನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ. ನಾನು ತನಿಖೆಯನ್ನು ಮುಂದುವರೆಸಿ, ಆರೋಪಿ ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡು ಠಾಣೆಗೆ ಹಾಜರಾಗಿದ್ದು, ಆತನನ್ನು ದಸ್ತಗಿರಿ ಮಾಡಿ ದಸ್ತಗಿರಿ ಕ್ರಮ ಜರುಗಿಸಿ ಠಾಣ ಜಾಮೀನು ಮೇಲೆ ಬಿಡುಗಡೆ ಮಾಡಿರುತ್ತೇನೆ. ಚಾಸ 3 ರವರ ಕಲಂ 164 ಸಿಆರ್ ಪಿಸಿ ಹೇಳಿಕೆ ಪಡೆದುಕೊಂಡಿರುತ್ತೇನೆ. ಘಟನ ಸ್ಥಳದ ಪಹಣಿ ಮತ್ತು ಮ್ಯುಟೇಶನ್ ರಿಜಿಸ್ಟರ ಎಕ್ಸಟ್ರಾಕ್ಟನ್ನು ಚಾಸ 11 ರವರಿಂದ ಪಡೆದುಕೊಂಡಿರುತ್ತೇನೆ. ತನಿಖೆ ಪೂರ್ಣಗೊಂಡಿದ್ದು, ಮೇಲ್ನೋಟಕ್ಕೆ ಆರೋಪ ಸಾಬಿತಾದ ಕಾರಣ ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸಾಕ್ಷಿ ಪ್ರ.ವ.ವ. ಪಹಣಿ ಮತ್ತು ಮ್ಯುಟೇಶನ್ ರಿಜಿಸ್ಟರ ಎಕ್ಸಟ್ರಾಕ್ಟ ಪ್ರತಿಗಳನ್ನು ನೋಡಿ ಗುರುತಿಸಿದ್ದು, ಅದು ಈಗಾಗಲೇ ನಿಪಿ.3 ರಿಂದ 5 ಎಂದು, ಸಾಕ್ಷಿ ಸಹಿಯನ್ನು ನಿಪಿ.3(ಎ) ರಿಂದ 5(ಎ) ಎಂದು ಗುರುತಿಸಲಾಯಿತು. ಆರೋಪಿಗಳು ಗೈರು ಹಾಜರಾಗಿದ್ದು, ಅವರನ್ನು ಗುರುತಿಸಲು ಅವರ ಪರ ವಕೀಲರು ತಕರಾರು ಇಲ್ಲವೆಂದು ತಿಳಿಸಿರುತ್ತಾರೆ.

ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ

ನಾನು ಕೃತ್ಯ ನಡೆದ ಸ್ಥಳಕ್ಕೆ ಬೇಟಿ ನೀಡಿರುವುದಿಲ್ಲ. ನಾನು ಚಾಸ1 ಮತ್ತು 3 ರವರನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿರುವುದಿಲ್ಲ. ಚಾಸ12 ರವರು ಘಟನ ಸ್ಥಳಕ್ಕೆ ಬೇಟಿ ನೀಡಿರುವುದಿಲ್ಲ ಮತ್ತು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಚಾಸ1 ರಿಂದ 3 ರವರನ್ನು ವೈದ್ಯಕೀಯ ಚಿಕಿತ್ಸೆಗೆ ಕಳುಹಿಸಿಕೊಟ್ಟಿರುವುದಿಲ್ಲ. ನಿಪಿ4 ರಲ್ಲಿ ಆರೋಪಿಗಳ ತಂದೆಯಾದ ಮಹದೇವಪ್ಪರವರ ಹೆಸರು ಕಂಡು ಬರುತ್ತಿದೆ ಎಂದರೆ ಸರಿ. ನಾನು ಆರೋಪಿಳು ಮತ್ತು ಫ್ರಾಸ1 ನಡುವೆ ಸಿವಿಲ್ ವ್ಯಾಜ್ಯದ ಬಗ್ಗೆ ಯಾವುದೇ ತನಿಖೆ ಮಾಡಿರುವುದಿಲ್ಲ. ಯಾವುದೇ ಗಲಾಟೆಯಾಗದಿದ್ದರೂ ಸಹ ಸಿವಿಲ್ ವ್ಯಾಜ್ಯಕ್ಕೆ ಅನುಕೂಲವಾಗಲಿ ಎಂದು ಚಾಸ1 ರವರು ಸಲ್ಲಿಸಿದ ಸುಳ್ಳು ದೂರಿನ ಪೂರಕವಾಗಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ